# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 232 | Pages. 2 | Date: 26-07-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 232 - ಪುಟಗಳು : 2 - 26 ಜುಲೈ 2025 ಶನಿವಾರ Ph: 8762954248 ದರ : ₹1


# ಅರಸೀಕೆರೆಯಲ್ಲಿಂದು ಸಿಎಂ ಶಕ್ತಿ ಪ್ರದರ್ಶನ

## ತಾಲ್ಲೂಕು ಕ್ರೀಡಾಂಗಣದಲ್ಲಿ ಕಾಂಗ್ರೆಸ್ ನಾಯಕರ ಸಮಾಗಮ : ವಿವಿಧ ಕಾಮಗಾರಿ ಉದ್ಘಾಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಣೆ ಕಾರ್ಯಕ್ರಮಕ್ಕೆ ಬರದ ನಾಡು ಅರಸೀಕೆರೆ ಸಿದ್ಧಗೊಂಡಿದೆ.

ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಜು. 26ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಸಮಾರಂಭ ಆರಂಭವಾಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಸೇರಿ ಮತ್ತಿತರರು ಭಾಗವಹಿಸಲಿದ್ದಾರೆ. ಈ ಮೂವರು ನಾಯಕರು ಬೆಂಗಳೂರಿನ ಹೆಚ್ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಅರಸೀಕೆರೆಯ ಗುಂಡಕಾನಹಳ್ಳಿಯ ಕಸ್ತೂರ ಬಾ ಟ್ರಸ್ಟ್ ಆವರಣದ ಹೆಲಿಪ್ಯಾಡ್‌ಗೆ ಆಗಮಿಸಲಿದ್ದಾರೆ. ಅಲ್ಲಿಂದ ನೇರವಾಗಿ ಜೇನುಕಲ್ ನಗರದ ತಾಲ್ಲೂಕು ಕ್ರೀಡಾಂಗಣದ ವೇದಿಕೆಗೆ ತೆರಳುವರು. ಕ್ಷೇತ್ರ ಶಾಸಕ ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಸೇರಿ ವಿವಿಧ ಇಲಾಖೆ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್, ಸರ್ಕಾರಿ ಈಜುಕೊಳ, ನಗರಸಭೆಯ ತರಕಾರಿ ಮಾರುಕಟ್ಟೆ, ವಾಣಿಜ್ಯ ಸಂಕೀರ್ಣವನ್ನು ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ.

ಒಳಾಂಗಣ ಕ್ರೀಡಾಂಗಣ, ಗಂಡಸಿ ಹೋಬಳಿ ಭಾಗಕ್ಕೆ ಹೇಮಾವತಿ ನೀರು ಪೂರೈಸುವ ಯೋಜನೆ, ಭದ್ರಾ ಮೇಲ್ದಂಡೆ ಮೂಲಕ ಬಾಣಾವರ, ಕಣಕಟ್ಟೆ ಭಾಗದ ಕೆರೆಗಳಿಗೆ ನೀರು ಹರಿಸುವುದು, ಪ್ರಗತಿ ಪಥ ಯೋಜನೆಯಡಿ 35 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿ, 50 ಕೋಟಿ ರೂ. ವೆಚ್ಚದಲ್ಲಿ ವಿವಿಧ ಹಾಸ್ಟೆಲ್ ನಿರ್ಮಾಣ ಸೇರಿ ವಿವಿಧ ಕಾಮಗಾರಿಗೆ ಇದೇ ಸಂದರ್ಭದಲ್ಲಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗು ರಾಜೀವ್ ಗಾಂಧಿ ವಸತಿ ಯೋಜನೆಯಡಿ ನಿರ್ಮಿಸಿರುವ 300 ಮನೆ ಮಾಲೀಕರಿಗೆ ಹಕ್ಕುಪತ್ರ ವಿತರಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಲಿದ್ದಾರೆ. ಅರಸೀಕೆರೆ ವಿಧಾನಸಭಾ ಕ್ಷೇತ್ರ ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ಮೊತ್ತದ ಕಾಮಗಾರಿ ಘೋಷಿಸಿದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗೆ ಸನ್ಮಾನಕ್ಕೆ ತಾಲ್ಲೂಕು ಆಡಳಿತ ಅಗತ್ಯ ಸಿದ್ಧತೆ ಮಾಡಿಕೊಂಡಿದೆ.

### ಶಕ್ತಿ ಪ್ರದರ್ಶನಕ್ಕೆ ಕೈ ಸಜ್ಜು

ಮುಖ್ಯಮಂತ್ರಿ ಸಿದ್ದರಾಮಯ್ಯ ಅರಸೀಕೆರೆ ನಗರಕ್ಕೆ ಭೇಟಿ ನೀಡುತ್ತಿರುವುದು



### 60 ಸಾವಿರ ಜನರು ಸೇರುವ ನಿರೀಕ್ಷೆ

ಜೇನುಕಲ್ ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಅದ್ದೂರಿ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು ಅಂದಾಜು 60 ಸಾವಿರ ಜನರು ಭಾಗವಹಿಸುವ ನಿರೀಕ್ಷೆಯಿದೆ. ಈಗ ಮಳೆ ಸುರಿಯುತ್ತಿರುವುದರಿಂದ ಜರ್ಮನ್ ಟೆಂಟ್ ಸಹ ಹಾಕಲಾಗಿದೆ. ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದ್ದು ನಗರದ ತುಂಬೆಲ್ಲಾ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಭದ್ರತಾ ದೃಷ್ಟಿಯಿಂದ ಅಗತ್ಯ ಕ್ರಮ ಕೈಗೊಂಡಿದ್ದಾರೆ.

ಪಕ್ಷದ ಕಾರ್ಯಕರ್ತರಿಗೆ ಪುಳಕ ಉಂಟುಮಾಡಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳಲ್ಲಿ ಸಾಧನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಹಾಸನದಲ್ಲೂ ಬೃಹತ್ ಕಾರ್ಯಕ್ರಮ ನಡೆಸುವ ಚಿಂತನೆ ನಡೆದಿತ್ತಾದರೂ ಅದಕ್ಕೆ ಕಾಲ ಕೂಡಿಬಾರದ ಹಿನ್ನೆಲೆಯಲ್ಲಿ ಶನಿವಾರ ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ಫಲಾನುಭವಿಗಳಗೆ ಸವಲತ್ತು ವಿತರಣೆ ಹೆಸರಿನಲ್ಲಿ ಕೈ ಪಡೆ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಿದೆ.

### ಸಚಿವ ಸ್ಥಾನ ರೇಸ್‌ನಲ್ಲಿ ಕೆಎಂಶಿ

2023ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ಕೆ.ಎಂ. ಶಿವಲಿಂಗೇಗೌಡರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಚನ್ನರಾಯಪಟ್ಟಣದಲ್ಲಿ ಜು. 20ರಂದು ನಡೆದ ಯುವ ಪರ್ವ ಕಾರ್ಯಕ್ರಮದಲ್ಲೂ ಸ್ಥಳೀಯರಿಗೆ ಸಚಿವ ಸ್ಥಾನ ನೀಡಿದರೆ 2028ರ ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯ ಏಳು ಕ್ಷೇತ್ರಗಳನ್ನು ಗೆಲ್ಲಿಸಿಕೊಡುವ ಭರವಸೆ ನೀಡಿದ್ದಾರೆ. ಕಾಂಗ್ರೆಸ್‌ನಿಂದ ಗೆದ್ದಿರುವ ಜಿಲ್ಲೆಯ ಏಕೈಕ ಶಾಸಕ ಕೆ.ಎಂ. ಶಿವಲಿಂಗೇಗೌಡರಾಗಿದ್ದು ಅವರಿಗೆ ಸೂಕ್ತ ಸ್ಥಾನಮಾನ ಕಲ್ಪಿಸುವುದು ಕಾಂಗ್ರೆಸ್‌ಗೂ ಅನಿವಾರ್ಯವಾಗಿದೆ. ಶೀಘ್ರದಲ್ಲೇ ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆಯಾಗಲಿದ್ದು ಶಿವಲಿಂಗೇಗೌಡರಿಗೆ



ಅದೃಷ್ಟ ಖುಲಾಯಿಸುವ ಸಾಧ್ಯತೆ ಇದೆಯೆಂದು ಹೇಳಲಾಗುತ್ತಿದೆ. ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಬೆಂಬಲಿಗರನ್ನು ಪರಿಗಣಿಸುವಂತೆ ಅರಸೀಕೆರೆ ಶಾಸಕರು ವರಿಷ್ಠರಿಗೆ ಮನವಿ ಮಾಡಿದ್ದಾರೆ. ಜೊತೆಗೆ ಜಿಲ್ಲಾ ಉಸ್ತುವಾರಿ ಜವಾಬ್ದಾರಿ ತನಗೆ ಬೇಡವೆಂದು ಕೆ.ಎನ್. ರಾಜಣ್ಣ ಅವರು ಈಗಾಗಲೇ ಸ್ಪಷ್ಟಪಡಿಸಿರುವುದರಿಂದ ಮುಂಬರುವ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಹೈಕಮಾಂಡ್ ಸ್ಥಳೀಯರಿಗೆ ಅವಕಾಶ ಕಲ್ಪಿಸುವ ಸಾಧ್ಯತೆಗಳು ದಟ್ಟವಾಗಿವೆ.

# ಕಾಡು ಎಮ್ಮೆಗಳ ಹಾವಳಿಗೆ ಅಪಾರ ಬೆಳೆ ನಾಶ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ಯಸಳೂರು ಹೋಬಳಿ ಶಿವನಹಳ್ಳಿತಾರಿಬೈಲು, ಕೆರೋಡಿ ಗ್ರಾಮ ವ್ಯಾಪ್ತಿಯಲ್ಲಿ ಕಾಡು ಎಮ್ಮೆಗಳು ಗದ್ದೆಗೆ ಲಗ್ಗೆಯಿಟ್ಟು ಅಪಾರ ಪ್ರಮಾಣದ ಭತ್ತದ ಬೆಳೆಯನ್ನು ನಾಶಪಡಿಸಿವೆ.

ಕೆರೋಡಿ ಗ್ರಾಮದ ರೈತರಾದ ಮಹೇಶ್ ಹಾಗೂ ದಿನೇಶ್ ಅವರ ಭತ್ತದ ಗದ್ದೆಗೆ ಸುಮಾರು 67 ಕಾಡೆಮ್ಮೆಗಳು ನುಗ್ಗಿ, ನಾಟಿಗೆ ಸಿದ್ಧಪಡಿಸಿದ್ದ ಸಸಿ ಮಡಿಯ ಸಸಿಗಳನ್ನು ತಿಂದು, ತುಳಿದು ಸಂಪೂರ್ಣ ನಾಶಪಡಿಸಿದೆ.

ಈ ಭಾಗದಲ್ಲಿ ಕಾಡು ಪ್ರಾಣಿಗಳ ನಿರಂತರ ಹಾವಳಿಯಿಂದ ರೈತರು ಆರ್ಥಿಕ ನಷ್ಟಕ್ಕೊಳಗಾಗಿ ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ. ಭತ್ತದ ನಾಟಿ ಕಾರ್ಯ ಆರಂಭಿಸಲು ಸಿದ್ಧತೆ ಮಾಡಿಕೊಂಡಿದ್ದ ಅವರು ಈಗ ಮತ್ತೆ ಮೊದಲಿನಿಂದ ಸಿದ್ಧತೆ ಮಾಡಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಕಾಡು ಎಮ್ಮೆಗಳೊಂದಿಗೆ ಕಾಡಾನೆಗಳ ಉಪಟಳವೂ ಹೆಚ್ಚಾಗಿದ್ದು, ಕೃಷಿಭೂಮಿ ಹಾಗೂ ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದೆ. ರೈತರು ತಮ್ಮ ಬೆಳೆ ರಕ್ಷಿಸಲು ನಾನಾ ಕ್ರಮ ತೆಗೆದುಕೊಂಡರೂ ಅರಣ್ಯ ಇಲಾಖೆ ಕಾಡು ಪ್ರಾಣಿಗಳನ್ನು ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದ್ದಾರೆ.

ಕಾಡು ಎಮ್ಮೆ ಹಾಗೂ ಆನೆಗಳ ಹಾವಳಿ ಈ ಭಾಗದಲ್ಲಿ ಹಲವಾರು ವರ್ಷಗಳಿಂದಲೂ ಇರುವ ಸಮಸ್ಯೆಯಾಗಿದ್ದು ಇತ್ತೀಚೆಗೆ ಇದು ಇನ್ನಷ್ಟು ಬಿಗಡಾಯಿಸಿದೆ. ರೈತರು ಸರ್ಕಾರ ಹಾಗೂ ಅರಣ್ಯ ಇಲಾಖೆಯ ವತಿಯಿಂದ ತಕ್ಷಣ ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಾದರಿಗೆ ವಿರೋಧ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎಸ್‌ಎಸ್‌ಎಲ್‌ಸಿ ಲಿಖಿತ ಪರೀಕ್ಷೆ ಪಾಸಾಗಲು ಕೇವಲ 33 ಅಂಕ ಸಾಕು ಎಂದು ರಾಜ್ಯ ಸರ್ಕಾರ ಕರಡು ನಿಯಮಾವಳಿ ಪ್ರಕಟಿಸಿರುವುದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾಡಿರುವ ಅನ್ಯಾಯ ಮತ್ತು ಮಕ್ಕಳನ್ನು ಓದಿನಿಂದ ಕುಗ್ಗಿಸುವ ಪ್ರಯತ್ನ ಎಂದು ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ ಖಂಡಿಸಿದ್ದಾರೆ.

ಈ ವರೆಗೂ ಎಲ್ಲ ಮಕ್ಕಳು ತಮ್ಮ ಭವಿಷ್ಯದ ಪ್ರಮುಖ ಘಟ್ಟ ಆಗಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಗಂಭೀರವಾಗಿ ಅಧ್ಯಯನ ಮಾಡಿ ಎದುರಿಸುತ್ತಿದ್ದರು. ಇನ್ನಷ್ಟು ಚೆನ್ನಾಗಿ ಓದಿ ಹೆಚ್ಚು ಅಂಕ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಿ ಎಂದು ಉತ್ತೇಜಿಸಬೇಕಿದ್ದ ಸರ್ಕಾರವೇ, ಒಬ್ಬ ವಿದ್ಯಾರ್ಥಿ ಕೇವಲ 33 ಅಂಕ ಪಡೆದರೆ ಪಾಸ್ ಎಂಬ ನಿಯಮ ತರಲು ಹೊರಟಿರುವುದು ಯಾವುದರ ಸುಧಾರಣೆಗೆ ಎಂಬ ಅನುಮಾನ ಮೂಡಿದೆ ಎಂದಿದ್ದಾರೆ.



ಹಾಸನ ಜಿಲ್ಲೆ ಸೇರಿದಂತೆ ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾವಾರು ಉತ್ತಮ ಸಾಧನೆ ಮಾಡಲು ಶಿಕ್ಷಣ ಇಲಾಖೆ, ಅಧಿಕಾರಿಗಳು ಹಾಗೂ ಶಿಕ್ಷಕರು ಕಠಿಣ ಪರಿಶ್ರಮ ಹಾಕಬೇಕು ಎಂದು ಹೇಳುವ ಸರ್ಕಾರ, ಉತ್ತೀರ್ಣ ಆಗುವುದನ್ನು ಇಷ್ಟೊಂದು ಸುಲಭ ಮಾಡಿದರೆ ಶಿಕ್ಷಕರು ಹಾಗೂ ಮಕ್ಕಳಲ್ಲಿ ಗಂಭೀರತೆ ಎಲ್ಲಿ ಉಳಿಯಲಿದೆ ಎಂದು ಪ್ರಶ್ನೆ ಮಾಡಿದ್ದಾರೆ.

ಹೊಸ ನಿಯಮಾವಳಿ ಪ್ರಕಾರ ಶಿಕ್ಷಕರು ಪಾಠ ಮಾಡದೇ ಇದ್ದರೂ ಆಂತರಿಕ ಮೌಲ್ಯಮಾಪನದಲ್ಲಿ 20 ಅಂಕ ನೀಡುತ್ತಾರೆ. ಉಳಿದ 80 ಅಂಕದ ಲಿಖಿತ ಪರೀಕ್ಷೆಯಲ್ಲಿ 13 ಮಾರ್ಕ್ಸ್ ಪಡೆದರೆ ಸಾಕು ಎಂದು ವಿದ್ಯಾರ್ಥಿಗಳೂ ಬೇಕಾಬಿಟ್ಟಿ ಓದುತ್ತಾರೆ. ಇದಕ್ಕೆಲ್ಲಾ ಸರ್ಕಾರವೇ ಹೊಣೆ ಎಂದು ದೂರಿದ್ದಾರೆ.

ಮೊದಲೇ ಕೆಲವು ಶಿಕ್ಷಕರು ಸರಿಯಾಗಿ ಪಾಠ ಮಾಡುತ್ತಿಲ್ಲ, ಬೋಧನೆ ವೃತ್ತಿ ಬಿಟ್ಟು ಬೇರೆ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ ಎಂಬ ಸಾರ್ವಜನಿಕ ಆರೋಪ ಇದೆ. ವಾಸ್ತವ ಹೀಗಿರುವಾಗ ಸರ್ಕಾರವೇ ಅವರನ್ನು ಬೇರೆ ಬೇರೆ ಚಟುವಟಿಕೆಗಳಿಗೆ ಪ್ರೋತ್ಸಾಹಿಸಲು ಮುಂದಾಗಿರುವಂತೆ ಕಾಣುತ್ತಿದೆ ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ 625 ಅಂಕಕ್ಕೆ ಕೇವಲ 206 ಅಂಕ ಪಡೆಯುವ ಎಲ್ಲ ವಿದ್ಯಾರ್ಥಿಗಳು ತೇರ್ಗಡೆ ಆಗುತ್ತಾರೆ ಎಂಬ ಸಿಬಿಎಸ್‌ಇ ಮಾದರಿ ಪರೀಕ್ಷಾ ಪದ್ಧತಿಯನ್ನು ಅನುಷ್ಠಾನಕ್ಕೆ ಮುಂದಾಗಿ ಪ್ರಕಟ ಮಾಡಿರುವ ಕರಡು ಅಧಿಸೂಚನೆಯನ್ನು ಕೂಡಲೇ ವಾಪಸ್ ಪಡೆಯಬೇಕು. ಈ ಹಿಂದೆ

ಪರೀಕ್ಷಾ ಪದ್ಧತಿಯನ್ನೇ ರಾಜ್ಯದಲ್ಲಿ ಮುಂದುವರಿಸಬೇಕು ಎಂದು ರಘು ಒತ್ತಾಯಿಸಿದ್ದಾರೆ. ಇಲ್ಲದಿದ್ದರೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಭಯ ಹಾಗೂ ಗಾಂಭೀರ್ಯತೆ ಹಾಳಾಗಲಿದೆ. ಓದುವ ಮಕ್ಕಳನ್ನು ಸರ್ಕಾರವೇ ವಿಮುಖಗೊಳಿಸಿದಂತೆ ಆಗಲಿದೆ. ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ಮಕ್ಕಳ ಬಗ್ಗೆ ಪೋಷಕರು ಅಗಾಧ ಆಸೆ, ನಿರೀಕ್ಷೆ, ಕನಸು ಇಟ್ಟುಕೊಂಡಿರುತ್ತಾರೆ. ಇನ್ನು ಮುಂದೆ ನಾನು ಪಾಸಾಗಲು ಕಷ್ಟ ಪಡಬೇಕಿಲ್ಲ ಎಂದು ಮಕ್ಕಳು ವರಸೆ ಬದಲಿಸಿದರೆ ಹೆತ್ತವರು ಏನು ಮಾಡಬೇಕು ಎಂಬುದನ್ನು ಸರ್ಕಾರ ಮತ್ತೊಮ್ಮೆ ಯೋಚಿಸಲಿ, ಆಕ್ಷೇಪಣೆ ಪರಿಶೀಲನೆ ಬಳಿಕ ಅನುಷ್ಠಾನ ಮಾಡುವ ನಿರ್ಧಾರದಿಂದ ಹಿಂದೆ ಸರಿಯಲಿ ಎಂದು ಮನವಿ ಮಾಡಿದ್ದಾರೆ.

# ಮಕ್ಕಳಿಗೆ ಪಠ್ಯದ ಜೊತೆ ಮೌಲ್ಯಯುತ ಶಿಕ್ಷಣ ಕಲಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ವಿದ್ಯಾರ್ಥಿಗಳಿಗೆ ಪಠ್ಯಬೋಧನೆ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಸಿಕೊಡುವತ್ತ ವಿದ್ಯಾಲಯಗಳು ಗಮನ ಹರಿಸಬೇಕು ಎಂದು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಹೆಬ್ಬಾಳು ಹಾಲಪ್ಪ ಹೇಳಿದರು.

ಪಟ್ಟಣದ ವೈಡಿಡಿ ಪ್ರಥಮ ದರ್ಜೆ ಕಾಲೇಜು ಐಕ್ಯೂಎಸಿ ಮತ್ತು ಸಮಾಜ ಶಾಸ್ತ್ರ ವಿಭಾಗದಿಂದ ಶುಕ್ರವಾರ ಹಮ್ಮಿಕೊಂಡಿದ್ದ 'ಪ್ರಸ್ತುತ ಸಮಾಜದಲ್ಲಿ ಮೌಲ್ಯಾಧಾರಿತ ಶಿಕ್ಷಣದ ಪಾತ್ರ' ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶ್ವವಿದ್ಯಾಲಯಗಳು ಮಕ್ಕಳಿಗೆ ಪಠ್ಯ ಬೋಧನೆ ಜೊತೆಗೆ ಸಂಸ್ಕಾರ ನೀಡಿದರೆ ಮಾತ್ರ ಸದೃಢ ಸಮಾಜ ನಿರ್ಮಿಸಬಹುದು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಮಾರಕ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಮೌಲ್ಯಾಧಾರಿತ ಶಿಕ್ಷಣವು ವ್ಯಕ್ತಿತ್ವ ವಿಕಸನ ಮತ್ತು ಸಮಾಜದ ಅಭಿವೃದ್ಧಿಗೆ ಅತ್ಯಗತ್ಯ.




ಅದು ನೈತಿಕ ಮೌಲ್ಯಗಳನ್ನು ಬೆಳೆಸುತ್ತದೆ. ಜವಾಬ್ದಾರಿಯುತ ನಾಗರಿಕರನ್ನು ರೂಪಿಸುತ್ತದೆ. ಸಮಾಜದಲ್ಲಿ ಸಾಮರಸ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಮೌಲ್ಯಾಧಾರಿತ ಶಿಕ್ಷಣವು ವಿದ್ಯಾರ್ಥಿಗಳಿಗೆ ಉತ್ತಮ ನಡವಳಿಕೆ, ಪ್ರಾಮಾಣಿಕತೆ ಮತ್ತು ಇತರರೊಂದಿಗೆ ಗೌರವದಿಂದ ವರ್ತಿಸಲು ಕಲಿಸುತ್ತದೆ ಎಂದರು.

ಶ್ರಮ ಮತ್ತು ಸಾಧನೆ ಇಲ್ಲದೆ ಹಣ ಕೊಟ್ಟು ಗೌರವ ಪಡೆಯಲು ಹಾತೊರೆಯುವವರನ್ನು ಬಳಸಿಕೊಳ್ಳುವ ನಕಲಿ ವಿಶ್ವವಿದ್ಯಾಲಯಗಳ ಹಾವಳಿ ಮಿತಿಮೀರಿದ್ದು, ಹಣ ಪಡೆದು ಗೌರವ ಡಾಕ್ಟರೇಟ್ ನೀಡುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಕಾಲೇಜಿನ ಗ್ರಂಥಾಲಯದ ಸದ್ಬಳಕೆ ಮಾಡಿಕೊಳ್ಳಬೇಕು. ಸಾಹಿತ್ಯದಲ್ಲಿ ತೊಡಗಿಸಿಕೊಂಡರೆ ವ್ಯಕ್ತಿತ್ವ ವಿಕಸನವಾಗುವುದರ ಜೊತೆಗೆ ನಾಡು ನುಡಿಯನ್ನು ಬೆಳೆಸಿದಂತಾಗುತ್ತದೆ ಎಂದು ತಿಳಿಸಿದರು.

ಉಪನ್ಯಾಸಕ ಎಂ.ಜೆ. ದಯಾನಂದ ಮಾತನಾಡಿ, ಮೌಲ್ಯಾಧಾರಿತ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ನೈತಿಕತೆ, ಪ್ರಾಮಾಣಿಕತೆ, ಸಹಾನುಭೂತಿ ಮತ್ತು ಜವಾಬ್ದಾರಿಯಂತಹ ಮೌಲ್ಯಗಳನ್ನು ಬೆಳೆಸುತ್ತದೆ. ಅದು ವ್ಯಕ್ತಿತ್ವ ವಿಕಸನಕ್ಕೆ ಆಧಾರವಾಗಿದೆ. ಮೌಲ್ಯಾಧಾರಿತ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಸಮಾಜಕ್ಕೆ ಕೊಡುಗೆ ನೀಡುವ ಮನೋಭಾವವನ್ನು ಬೆಳೆಸುತ್ತದೆ.ಮೌಲ್ಯ ಶಿಕ್ಷಣವು ವಿದ್ಯಾರ್ಥಿಗಳಿಗೆ ವಿಮರ್ಶಾತ್ಮಕ ಚಿಂತನೆ, ಸಮಸ್ಯೆ-ಪರಿಹರಿಸುವಿಕೆ ಮತ್ತು ಒತ್ತಡ ನಿರ್ವಹಣೆಯಂತಹ ಜೀವನ ಕೌಶಲಗಳನ್ನು ಕಲಿಸುತ್ತದೆ ಎಂದು ಹೇಳಿದರು.

ಪ್ರಾಂಶುಪಾಲ ಡಾ. ಹೆಚ್.ಎಂ. ಮಹೇಶ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಸಾಹಿತ್ಯ ಅಧ್ಯಯನಕ್ಕೆ ಒತ್ತು ನೀಡಬೇಕು. ಆಗಮಾತ್ರ ಬದುಕಿನಲ್ಲಿ ಪರಿಪೂರ್ಣತೆ ಕಾಣಲು ಸಾಧ್ಯ. ವಿಶೇಷವಾಗಿ ಶರಣ ಸಾಹಿತ್ಯ ಬದುಕಿಗೆ ದಾರಿ ದೀಪವಾಗಲಿದೆ ಎಂದು ತಿಳಿಸಿದರು.

ಸಮಾಜ ಶಾಸ್ತ್ರ ವಿಭಾಗ ಮುಖ್ಯಸ್ಥ ವೀರಭದ್ರಪ್ಪ, ಪದ್ಮೇಗೌಡ, ನಾಗೇಂದ್ರಪ್ಪ, ರಕ್ಷಿತಾ, ರಾಧಿಕಾ, ದೀಪಿಕಾ ಇತರರಿದ್ದರು.

# ಬಾಲ್ಯ ವಿವಾಹ ತಡೆಗೆ ಕ್ರಮ ವಹಿಸಲು ಸೂಚನೆ




ಹಾಸನ: ಜಿಲ್ಲೆಯಲ್ಲಿ ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ ಪ್ರಕರಣ ತಡೆಗೆ ಅಧಿಕಾರಿಗಳು ಗಮನ ಹರಿಸಬೇಕೆಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸದಸ್ಯ ವೆಂಕಟೇಶ್ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಎಲ್ಲಾ ಇಲಾಖೆಯ ಅಧಿಕಾರಿಗಳು ಸಕ್ರಿಯವಾಗಿ ತೊಡಗಿಸಿಕೊಂಡು ಪ್ರಕರಣ ತಡೆಗಟ್ಟಲು ಕ್ರಮ ವಹಿಸಬೇಕು. ಖಾಸಗಿ ಶಾಲೆಗಳು ಹೆಚ್ಚು ಮಕ್ಕಳನ್ನು ದಾಖಲು ಮಾಡಲು ಪೈಪೋಟಿ ನಡೆಸುತ್ತಿವೆ. ಆದರೆ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ನಿಯಮ ಪಾಲಿಸುವಲ್ಲಿ ವಿಫಲವಾಗುತ್ತಿವೆ. ಮಕ್ಕಳ ಸುರಕ್ಷತೆ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಕರ್ನಾಟಕ ಮಕ್ಕಳ ಸುರಕ್ಷತಾ ನೀತಿ 2016ರ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕೆಂದರು.

ಕಾನೂನು ಪಾಲನೆ ಮಾಡದ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಗಮನ ಹರಿಸಬೇಖು. ತಾಲ್ಲೂಕು ಮಟ್ಟದ ಕಾವಲು ಸಮಿತಿ, ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿ ಸಭೆ ನಡೆಸಿ ಮಕ್ಕಳ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ತಹಶೀಲ್ದಾರ್ ಗೀತಾ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಿರೀಶ್, ಜಿಲ್ಲಾ ಮಕ್ಕಳ ಸುರಕ್ಷತಾಧಿಕಾರಿ ಕೆ.ಜಿ. ದಿಲೀಪ್ ಮತ್ತು ಸಿಡಿಪಿಓ ಜ್ಯೋತಿಲಕ್ಷ್ಮೀ ಮತ್ತಿತರರಿದ್ದರು.

# ಲಿಂಗತ್ವ ಅಲ್ಪಸಂಖ್ಯಾತರ ಕಡೆಗಣನೆ ಬೇಡ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಲಿಂಗತ್ವ ಅಲ್ಪಸಂಖ್ಯಾತರ ಕುರಿತು ಇರುವ ತಪ್ಪು ಕಲ್ಪನೆಗಳನ್ನು ಎಲ್ಲರೂ ತೊಡೆದು ಹಾಕಬೇಕು. ಈ ಬಗ್ಗೆ ತಿಳಿವಳಿಕೆ ಹೊಂದಬೇಕು ಹಾಗೂ ಅವರನ್ನು ಕಡೆಗಣಿಸಬಾರದು ಎಂದು ಸಂಗಮ ಕಾರ್ಯಕಾರಿಣಿ ನಿರ್ದೇಶಕ ಮನೋಹರ್ ಯಲವರ್ತಿ ತಿಳಿಸಿದರು.

ನಗರದ ಸ್ವಾಭಿಮಾನಿ ಭವನದಲ್ಲಿ ಸಂಗಮ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಕುಟುಂಬದ ಸದಸ್ಯರಿಗೆ ಸನ್ಮಾನ ಮತ್ತು ಪ್ರಗತಿಪರ ಸಂಘಟನಕಾರರಿಗೆ ಮನವರಿಕೆ ಕಾರ್ಯಕ್ರಮದಲ್ಲಿ ಮಾತನಾಡಿ, ಲಿಂಗ ಸಮಾನತೆ ಹಾಗೂ ಮಹಿಳಾ ಸಬಲೀಕರಣವನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯಕ. ದೈಹಿಕ ರಚನೆ ಮತ್ತು ಸಂತಾನೋತ್ಪತ್ತಿ ಕ್ರಿಯೆಗಳಲ್ಲಿ ಹೆಣ್ಣು ಹಾಗೂ ಗಂಡು ಪ್ರತ್ಯೇಕತೆ ಹೊಂದಿವೆ. ಹೆಣ್ಣು ಮತ್ತು ಗಂಡಿನ ಜೈವಿಕ ಲಕ್ಷಣಗಳು ಹುಟ್ಟಿನಿಂದಲೇ ನಿರ್ಧರವಾಗುತ್ತದೆ. ಲಿಂಗವು ಸೃಷ್ಟಿಯ ಸಹಜ ಸ್ಥಿತಿ. ಅದು ಪಕೃತಿದತ್ತವಾದ ಗುಣವಾಗಿದ್ದು ಜನಾಂಗದ ಬೆಳವಣಿಗೆ ಹಾಗು ಸಮಾಜ ಜೀವನಕ್ಕೆ ಬಹಳ ಮುಖ್ಯ. ಹೆಣ್ಣು ಗಂಡುಗಳಲ್ಲಿ ಕೆಲವೊಂದು ವಿಶೇಷ ಗುಣಲಕ್ಷಣಗಳು,



ಕ್ರೋಮೋಸೋಮುಗಳು, ದೇಹ ರಚನೆ ಹಾಗು ಸಂತಾನೋತ್ಪತ್ತಿಯ ವಿಶೇಷತೆ ಇರುವುದು ಜೈವಿಕ ಗುಣ.ಆದರೆ ಸ್ತ್ರೀ-ಪುರುಷರ ನಡುವೆ ಅಸಮಾನತೆ ಮತ್ತು ಭೇದ ಭಾವಗಳು ಜೈವಿಕ ಹುಟ್ಟಿನಿಂದ ಬಂದಿಲ್ಲ.

ಅದು ಒಂದು ಸಾಮಾಜಿಕ ಸಂಸ್ಕತಿಯು ಆಚರಣೆಗೆ ತರುತ್ತದೆ. ಆದುದರಿಂದ ಲಿಂಗವೂ ಜೈವಿಕವಾದ ಮತ್ತು ಪ್ರಕೃತಿ ಸಹಜಗುಣವಾಗಿಯೂ, ಜಂಡರ್ ಎನ್ನುವುದು ಒಂದು ಆಚರಣೆಯಾಗಿದೆ ಎನ್ನಬಹುದು ಎಂದು ಹೇಳಿದರು.

## ಕುಟುಂಬಸ್ಥರಿಗೆ ಸನ್ಮಾನ

ಲಿಂಗತ್ವ ಅಲ್ಪಸಂಖ್ಯಾತರೆಂದರೆ ಶಾಶ್ವತವಾಗಿ ಕುಟುಂಬದಿಂದ ದೂರ ಇರುವವರು ಎಂಬ ಪರಿಸ್ಥಿತಿ ಇರುತ್ತದೆ. ಆದರೆ ಅದಕ್ಕೆ ತದ್ವಿರುದ್ಧ ಪ್ರಸಂಗಕ್ಕೆ ನಗರದ ಸ್ವಾಭಿಮಾನ ಭವನ ಶುಕ್ರವಾರ ಸಾಕ್ಷಿಯಾಯಿತು. ಸಂಗಮ ಸಂಸ್ಥೆಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರನ್ನು ಮನೆಗೆ ಸೇರಿಸಿಕೊಂಡ ಹಿನ್ನಲೆಯಲ್ಲಿ ಕುಟುಂಬಸ್ಥರನ್ನು ಸನ್ಮಾನಿಸಿ ಗೌರವಿಸಲಾಯಿತು. ಅರಕಲಗೂಡು ತಾಲ್ಲೂಕಿನ ಕವನ ಹಾಗೂ ಚನ್ನರಾಯಪಟ್ಟಣದ ಕಾವ್ಯ ಅವರನ್ನು ಹೆತ್ತವರು ಪುನ: ಮನೆಗೆ ಆಹ್ವಾನಿಸಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರು ಒಂದು ಬಾರಿ ಮನೆ ಬಿಟ್ಟು ಹೊರಬಂದ ಮೇಲೆ ಸೂಕ್ತ ನೆಲೆ ಇಲ್ಲದೆ ಪರದಾಡುತ್ತಾರೆ. ಹೊಟ್ಟೆಪಾಡಿಗಾಗಿ ಭಿಕ್ಷಾಟನೆಯಿಂದ ಹೊಟ್ಟೆ ಹೊರೆಯಬೇಕಾಗುತ್ತದೆ. ತಮ್ಮ ಮಕ್ಕಳಿಗೆ ಅಂತಹ ಪರಿಸ್ಥಿತಿ ನಿರ್ಮಾಣವಾಗಬಾರದೆಂದು ಹೆತ್ತವರು ತಮ್ಮ ಮಕ್ಕಳನ್ನು ಮನೆಗೆ ಸೇರಿಸಿಕೊಂಡಿರುವುದು ಲಿಂಗತ್ವ ಅಲ್ಪಸಂಖ್ಯಾತರು ನಿಟ್ಟುಸಿರು ಬಿಡುವಂತಾಗಿದೆ.

# ಜಾತಿ ನಿಂದನೆ, ಹಲ್ಲೆ ಆರೋಪ: ಕ್ರಮಕ್ಕೆ ಆಗ್ರಹ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಾಲ್ಲೂಕಿನ ಚನ್ನಂಗಿಹಳ್ಳಿ ಗ್ರಾಮದ ದಲಿತ ಸಮುದಾಯದ ಕಮಲಮ್ಮ ಹಾಗೂ ಅವರ ತಂಗಿ ರಾಜಮ್ಮ ಮೇಲೆ ಸವರ್ಣೀಯರು ಹಲ್ಲೆ ನಡೆಸಿದ್ದು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಹಕ್ಕುಗಳ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಅದೇ ಊರಿನ ಅಣ್ಣೇಗೌಡ ಮತ್ತು ಆತನ ಮಗ ಹರೀಶ್ ಎಂಬುವವರು ಹಲ್ಲೆ ನಡೆಸಿದ್ದಾರೆಂದು ದೂರಿದರು.

ಕಮಲಮ್ಮ ಚನ್ನಂಗಿಹಳ್ಳಿಯ ನಂಜೇಗೌಡ ಅವರ ಜಮೀನನ್ನು ವಾರಕ್ಕೆ ಪಡೆದಿದ್ದು, ಜು. 22ರ ಸಂಜೆ ದನ ಮೇಯಿಸಲು ಜಮೀನಿಗೆ ಹೋಗಿದ್ದಾಗ, ಹೊಲದಲ್ಲಿ ಹಾಕಿದ್ದ ಸೌದೆ ಎತ್ತಿಕೊಳ್ಳಿ ಎಂದು ಹೇಳಿದ್ದಕ್ಕೆ ಅಣ್ಣೇಗೌಡ, ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿದ್ದಾನೆ. ಇಷ್ಟು ಮಾತ್ರವಲ್ಲದೆ ಮನಬಂದಂತೆ ದೊಣ್ಣೆಯಿಂದ ಹೊಡೆದಿದ್ದಾನೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸಹೋದರಿ ಮೇಲಿನ ದೌರ್ಜನ್ಯ ಖಂಡಿಸಿ ರಾಜಮ್ಮ ಪ್ರಶ್ನಿಸಿದಾಗ ಅವರಿಗೂ ಕಪಾಳಮೋಕ್ಷ ಮಾಡಿದ್ದಾರೆ. ಕೀಳು ಜಾತಿಯವರು, ನನ್ನ ಮನೆಯ ಹತ್ತಿರ ಬಂದಿದ್ದೀರ ಎಂದು ಹಲ್ಲೆ ನಡೆಸಿದ್ದಾನೆ. ಹರೀಶ್ ಕೂಡ ಮನಬಂದಂತೆ ಹಲ್ಲೆ ನಡೆಸಿದ್ದಾನೆ. ಹಲ್ಲೆಯಿಂದ ನಿತ್ರಾಣಗೊಂಡ ಕಮಲಮ್ಮ ಅವರನ್ನು ಹಿಮ್ಸ್‌ಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ ಎಂದರು.

ಈ ಸಂಬಂಧ ಗೊರೂರು ಠಾಣೆಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ. ಕೂಡಲೇ ತಂದೆ ಮಗನನ್ನು ಬಂಧಿಸಬೇಕೆಂದು ಒತ್ತಾಯಿಸಿದರು.

ದಲಿತ ಮುಖಂಡ ಹೆಚ್.ಕೆ. ಸಂದೇಶ್, ಧರ್ಮೇಶ್, ಎಂ.ಜಿ. ಪೃಥ್ವಿ, ಟಿ.ಆರ್. ವಿಜಯಕುಮಾರ್, ರಮೇಶ್, ಅರವಿಂದ್ ಹಾಗೂ ಇತರರಿದ್ದರು.

# ಹಾರ್ಲೆ ರಸ್ತೆಗೆ ಒದಗಿ ಬಾರದ ಮರಸ್ತಿ ಭಾಗ್ಯ

## ಎಸ್ಟೇಟ್ ಮಾಲೀಕರ ಜಾಗದಲ್ಲಿ ಓಡಾಟ | ಮತ್ತೆ ಮಳೆಯಾದರೆ ತೊಂದರೆ ಖಚಿತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಸಕಲೇಶಪುರ ತಾಲ್ಲೂಕಿನ ಹಾರ್ಲೆ ರಸ್ತೆ ಧಾರಾಕಾರ ಮಳೆಗೆ ಸಂಪೂರ್ಣ ಕೊಚ್ಚಿ ವರ್ಷ ಉರುಳಿದರೂ ದುರಸ್ತಿಯಾಗದೆ ಸುತ್ತಲಿನ 25 ಹಳ್ಳಿಯ ಜನರು ಸಂಚಾರಕ್ಕೆ ಭಾರೀ ತೊಂದರೆ ಅನುಭವಿಸುವಂತಾಗಿದೆ.

ಕಳೆದ ವರ್ಷ ಜುಲೈನಲ್ಲಿ ಸುರಿದ ಮಳೆಗೆ ರಸ್ತೆ ಸಂಪೂರ್ಣ ಕುಸಿದು ಅನಾಹುತ ಸಂಭವಿಸಿದೆ. ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕಂದಾಯ ಸಚಿವ ಕೃಷ್ಣಬೈರೇಗೌಡ, ಶಾಸಕ ಸಿಮೆಂಟ್, ಸಂಸದ ಶ್ರೇಯಸ್ ಪಟೇಲ್, ಅಂದಿನ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು ಭೇಟಿ ನೀಡಿ ಆದಷ್ಟು ಬೇಗ ರಸ್ತೆ ಮರು ನಿರ್ಮಾಣ ಅಥವಾ ಸೇತುವೆ ನಿರ್ಮಿಸಿಕೊಡುವ ಭರವಸೆ ನೀಡಿದ್ದರು. ವರ್ಷ ಕಳೆದರೂ ಈ ನಿಟ್ಟಿನಲ್ಲಿ ಯಾವ ಪ್ರಗತಿಯೂ ಆಗದೇ ಇರುವುದರಿಂದ ಜನರು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

2024ರ ಮಳೆಗಾಲದಲ್ಲಿ ಶಿರಾಡಿ ಘಾಟ್‌ನ ಮಾರನಹಳ್ಳಿ, ದೊಡ್ಡತಪ್ಪಲು ಬಳಿ ಭಾರೀ ಭೂ ಕುಸಿತ ಸಂಭವಿಸಿದ್ದರಿಂದ ಹಾರ್ಲೆ ಮಾರ್ಗವಾಗಿ ವಾಹನಗಳು ಮಂಗಳೂರು ರಸ್ತೆ ಸಂಪರ್ಕಿಸುತ್ತಿದ್ದವು. ಅಲ್ಲಿಯೂ ಭಾರೀ ಕುಸಿತ ಉಂಟಾದ್ದರಿಂದ ಅನಿವಾರ್ಯವಾಗಿ ಚಾರ್ಮಾಡಿ ಘಾಟಿ ರಸ್ತೆಯನ್ನು ಅವಲಂಬಿಸಬೇಕಾಯಿತು. ಆದರೆ ಹಾರ್ಲೆ ಸೇರಿ ಸುತ್ತಲಿನ 25 ಗ್ರಾಮಗಳಿಗೆ ಸಂಪರ್ಕಿಸುವ ರಸ್ತೆ ಬಂದ್ ಆಯಿತು. ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಅಧಿಕಾರಿಗಳು ತ್ವರಿತಗತಿಯಲ್ಲಿ ಮಣ್ಣು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮತ್ತೊಂದೆಡೆ ಹಾರ್ಲೆ ರಸ್ತೆ ದುರಸ್ತಿಯತ್ತ ಗಮನ ಹರಿಸಲಿಲ್ಲ. ಹಾರ್ಲೆ ಎಸ್ಟೇಟ್‌ನ ಮಾಲೀಕರು ಮಾನವೀಯತೆ ದೃಷ್ಟಿಯಿಂದ ತಮ್ಮ ಜಾಗವನ್ನು ಸಾರ್ವಜನಿಕರ ಓಡಾಟಕ್ಕೆ ಬಿಟ್ಟುಕೊಟ್ಟಿದ್ದಾರೆ. ಅದು ಚಿಕ್ಕದಾದ ರಸ್ತೆಯಾಗಿದ್ದು ಒಂದು ವಾಹನ ಬಂದರೆ ಎದುರುಗಡೆಯಿಂದ ಮತ್ತೊಂದು ವಾಹನ ಬರುವಂತಿಲ್ಲ. ಸ್ವಲ್ಪ ಎಚ್ಚರ ತಪ್ಪಿದರೂ ಭಾರೀ ಅನಾಹುತದ ಆತಂಕವಿದೆ. ಈ ವರ್ಷ ಮಳೆ ಹೆಚ್ಚಾಗಿರುವುದರಿಂದ

### ಕೂಲಿ ಕಾರ್ಮಿಕರ ಪಾಡು ಹೇಳತೀರದು

ಹಾರ್ಲೆ ಮಾರ್ಗದಲ್ಲಿ ಬರುವ ದೇಖಲ, ಕುಂಬರಡಿ, ಕಾಡುಮನೆ, ಚಿಮ್ಮಿಕೋಲು ಸೇರಿ ಸುತ್ತಲಿನ 25 ಗ್ರಾಮಗಳ ಜನರು ರಸ್ತೆಗಾಗಿ ಪರದಾಡುವಂತಾಗಿದೆ. ದಿನಸಿ ಸಾಮಾಗ್ರಿ ಸೇರಿ ಅಗತ್ಯ ವಸ್ತುಗಳ ತರಲು ಸಕಲೇಶಪುರ ಪಟ್ಟಣಕ್ಕೆ ಬರಬೇಕು. ಕೂಲಿ ಕಾರ್ಮಿಕರು, ಎಸ್ಟೇಟ್ ಕಾರ್ಮಿಕರಿಗೆ ಪ್ರತಿ ಗುರುವಾರ ರಜೆ ಇರುತ್ತದೆ. ವಾರದ ಸಂತೆಗಾಗಿ ಪಟ್ಟಣಕ್ಕೆ ಹೋಗಲು ಸಹ ಸಾಧ್ಯವಾಗುತ್ತಿಲ್ಲ. ಮತ್ತೆ ಮಳೆಯಾದರೆ ಭಾರೀ ಕಷ್ಟವಾಗುತ್ತದೆ. ಶಿರಾಡಿ ಘಾಟ್ ರಸ್ತೆ ಬಂದ್ ಆದರೆ ಕೆಎಸ್ ಆರ್‌ಟಿಸಿ ಬಸ್ ಚಾಲಕರು, ಪ್ರವಾಸಿಗರು ಈ ರಸ್ತೆಯನ್ನೇ ಅವಲಂಬಿಸುತ್ತಾರೆ. ಕುಸಿದಿರುವ ರಸ್ತೆ ದುರಸ್ತಿ ಮಾಡಿಕೊಡಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.


### ಈಡೇರದ ಭರವಸೆ

2024ರ ಜುಲೈ 31 ರಂದು ಸ್ಥಳಕ್ಕೆ ಭೇಟಿ ನೀಡಿದ್ದ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಭರವಸೆ ನೀಡಿದ್ದರು. ಸುತ್ತಲಿನ 25 ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅದಾಗಿರುವುದರಿಂದ ತುರ್ತು ಕಾರ್ಯ ಕೈಗೊಳ್ಳಲಾಗುವುದೆಂದು ಹೇಳಿದ್ದರು. ಮಲೆನಾಡು ಭಾಗದಲ್ಲಿ ಭೂ ಕುಸಿತ ಸಮಸ್ಯೆ ಪರಿಹಾರಕ್ಕೆ 100 ಕೋಟಿ ರೂ. ಅನುದಾನ ನೀಡುವ ಭರವಸೆಯನ್ನೂ ನೀಡಿದ್ದರು. ರಸ್ತೆಗೆ ತಡೆಗೋಡೆ, ಪಿಚ್ಚಿಂಗ್, ಸರ್ಫಿಂಗ್, ಗಿಡ ನೆಡುವ ಕೆಲಸವನ್ನು ಭೂವಿಜ್ಞಾನಿಗಳ ಸಲಹೆ ಪಡೆದು ಕೈಗೊಳ್ಳಲಾಗುವುದೆಂಬ ಭರವಸೆ ನೀಡಿದ್ದರು. ಸಚಿರು ಹೇಳಿದಂತೆ ಯಾವುದು ಆಗಿಲ್ಲ.

ಆ ರಸ್ತೆಯು ಗುಂಡಿಮಯವಾಗಿದ್ದು ಸಂಚಾರಕ್ಕೆ ಯೋಗ್ಯವಾಗಿಲ್ಲ ಎಂದು ಸ್ಥಳೀಯರು ಅಳಲು ತೋಡಿಕೊಂಡರು.

ಈ ರಸ್ತೆ ಹಾಳಾಗಲು ಎತ್ತಿನಹೊಳೆ ಯೋಜನೆಯೂ ಕಾರಣವಾಗಿದೆ. ನೂರಾರು ಮರ ಕಡಿದು ಬೃಹದಾಕಾರದ ಕಬ್ಬಿಣದ ಪೈಪ್‌ಗಳನ್ನು ಅಳವಡಿಸಲು ಭೂಮಿ ಅಗೆದಿದ್ದಾರೆ. ಹೀಗಾಗಿ ಮಳೆಗಾಲದಲ್ಲಿ ಮಣ್ಣಿನ ಸವಕಳಿ ಹೆಚ್ಚಾಗಿ ರಸ್ತೆಗಳು ನಾಮಾವಶೇಷವಾಗಿವೆ.

# ಚ.ರಾ. ಪಟ್ಟಣ ಪುರಸಭೆಗೆ ಕವಿತಾರಾಜು ಉಪಾಧ್ಯಕ್ಷೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪಟ್ಟಣದಲ್ಲಿ ಹಿಂದುಳಿದ ವರ್ಗದ ಮತದಾರರು ಹೆಚ್ಚಿದ್ದು ಅದನ್ನು ಪರಿಗಣಿಸಿ ಅಧಿಕಾರ ನೀಡಿದ ಶಾಸಕ ಸಿ.ಎನ್. ಬಾಲಕೃಷ್ಣ ಹಾಗೂ ಸದಸ್ಯರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದು ಪುರಸಭೆ ನೂತನ ಉಪಾಧ್ಯಕ್ಷೆ ಕವಿತರಾಜು ತಿಳಿಸಿದರು.

ಉಪಾಧ್ಯಕ್ಷರಾಗಿ ಆಯ್ಕೆಯಾದ ಅವರು ಸಂಭ್ರಮಾಚರಣೆ ಬಳಿಕ ಮಾತನಾಡಿ, ಉಪಾಧ್ಯಕ್ಷ ಸ್ಥಾನ ನೀಡಿದ ಕ್ಷೇತ್ರದ ಶಾಸಕ ಸಿ.ಎನ್. ಬಾಲಕೃಷ್ಣ ಅವರಿಗೆ ಮತ್ತು ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಎಲ್ಲ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಿಂದುಳಿದ ವರ್ಗದ ಗಾಣಿಗ ಸಮುದಾಯದ ಸಾಮಾನ್ಯ ಮಹಿಳೆಗೆ ಈ ಹುದ್ದೆ ದೊರಕಿರುವುದು ಸಂತೋಷದ ವಿಚಾರ ಎಂದರು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಹಿಂದುಳಿದ ಸಮಾಜಗಳಲ್ಲಿ ಒಂದಾದ ಗಾಣಿಗ ಸಮುದಾಯವನ್ನು ಪ್ರಥಮ ಬಾರಿಗೆ ಗುರುತಿಸಿ ಉಪಾಧ್ಯಕ್ಷ ಸ್ಥಾನವನ್ನು ನೀಡಲಾಗಿದೆ. ಸದಸ್ಯೆ ಕವಿತಾರಾಜು ಅವರು ಪ್ರತಿನಿಧಿಸುವ ವಾರ್ಡ್ ಅಭಿವೃದ್ಧಿಯನ್ನ ಸಮರ್ಪಕವಾಗಿ ಮಾಡಿದ್ದು, ಅವರು ಇದೀಗ ಉಪಾಧ್ಯಕ್ಷರಾಗುವ ಮೂಲಕ ಅವರ ವ್ಯಾಪ್ತಿ ಇಡೀ ಪಟ್ಟಣಕ್ಕೆ ವಿಸ್ತರಿಸಿದೆ. ಅಧ್ಯಕ್ಷರ ಜೊತೆಗೂಡಿ ಪಟ್ಟಣದ ಸ್ವಚ್ಛತೆ ಕುರಿ ಕುಡಿಯುವ ನೀರು ಸೇರಿದಂತೆ ಅಭಿವೃದ್ಧಿ ಕಾರ್ಯಗಳಿಗೆ ಅವರು ಸಹಕರಿಸಲಿ ಎಂದರು.

ಜೆಡಿಎಸ್ ಸದಸ್ಯೆ ರಾಣಿಕೃಷ್ಣ ರಾಜೀನಾಮೆ ತೆರವಿನಿಂದ ಖಾಲಿಯಾಗಿದ್ದ ಸ್ಥಾನಕ್ಕೆ ಕವಿತಾರಾಜು ಅವರನ್ನು ಅವಿರೋಧ ಆಯ್ಕೆ ಮಾಡಲಾಯಿತು. ತಹಶೀಲ್ದಾರ್ ಜಿ.ಎಸ್. ಶಂಕರಪ್ಪ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

ಪುರಸಭಾಧ್ಯಕ್ಷ ಸಿ.ಎನ್. ಮೋಹನ್, ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಎ. ಗಣೇಶ್ ಸೇರಿ ಹಾಜರಿದ್ದ ಎಲ್ಲ ಸದಸ್ಯರು ಅಭಿನಂದಿಸಿದರು.

# ಸು ಫ್ರಮ್ ಸೋ

– ಪ್ರಶಾಂತ್ ಭಟ್ (2025)




ಮನದ ಹಾದಿ

ನಮಗೆ, ಕರಾವಳಿಯವರಿಗೆ ಭರಪೂರ ಕಾಮಿಡಿ ಬೇಕು. ಇಲ್ಲಿನ ತುಳು ನಾಟಕಗಳು ಕಾಮಿಡಿ ಇದ್ದರೆ ಓಡುವುದು ಜಾಸ್ತಿ. ಅದರಿಂದ ಗುಣವೂ ಇದೆ.ನಷ್ಟವೂ ಇದೆ.ಕೊಂಚ ಸೀರಿಯಸ್ ವಿಷಯಗಳ ಮೇಲೆ ಬರುವ ನಾಟಕ, ಸಿನಿಮಾ ಇಲ್ಲಿ ಹಾಗೆ ಹೋಗುವುದಿಲ್ಲ.

ಇದೆಲ್ಲ ಯಾಕೆ ಹೇಳಿದೆ ಎಂದರೆ ಈ ಸಿನಿಮಾದ ಟ್ರೈಲರ್ ನೋಡಿದವರಿಗೆ ಇದೊಂದು ಕಾಮಿಡಿ ಸಿನಿಮಾ ಅದರಲ್ಲೂ ತುಳು ಕಾಮಿಡಿ ಸಿನಿಮಾದ ಹಾಗಿದೆ ಅನಿಸಬಹುದು. ಆದರೆ ಈ ಸಿನಿಮಾ ನಿಮ್ಮನ್ನು ನಗಿಸುತ್ತದೆ. ನಕ್ಕು ನಲಿಸುತ್ತದೆ ಕರಾವಳಿಯವರಾದರಂತೂ ಒಂದೊಂದು ಪಾತ್ರಗಳೂ ನಿಮ್ಮದೇ ಗೆಳೆಯರ, ಸಂಬಂಧಿಕರ, ಊರಿನವರ ನೆನಪಿಸುತ್ತದೆ. ಮದುವೆ ಮನೆಗಳಲ್ಲಿ ಮೂಗು ಮುಟ್ಟ ಕುಡಿಯುವುದಿರಬಹುದು, ದೊಡ್ಡವರ ಅಬ್ಬರ ಇರಬಹುದು ಯಾವುದನ್ನೂ ಈ ಸಿನಿಮಾ ಬಿಟ್ಟಿಲ್ಲ. ನೋಡುತ್ತಾ ನೋಡುತ್ತಾ ನಾವೂ ಅದೇ ಊರಿನವರಾಗಿಬಿಡುತ್ತೇವೆ.

ಏನೋ ಒಂದು ಎಡವಟ್ಟು ಅದರ ಪರಿಣಾಮಗಳನ್ನು ಸಿನಿಮಾ ಹದವಾಗಿ ತೆರೆದಿಡುತ್ತಾ ಹೋಗುತ್ತದೆ. ಸಿನಿಮಾ ಶುರುವಾಗಿ ಒಂದು ಗಂಟೆ ಆಗುವಾಗ ಟಇನ್ನೇನಿದೆ ಕತೆ?ಟ ಎಂದು ಯೋಚಿಸತೊಡಗಿದೆ. ಆದರೆ ಕತೆ ಬೇರೆಯದೇ ಜಾಡು ಹಿಡಿಯುತ್ತದೆ. ಹೆಚ್ಚಿನ ತುಳು ನಾಟಕಗಳ ಹಾಗೆ ಅದು ಭಾವುಕತೆಯ ಹಾದಿ ಹಿಡಿಯುತ್ತದೆ. ಅದರಲ್ಲೂ ನಗಿಸುತ್ತದೆ. ಆದರೆ ಎಲ್ಲೂ ಕರುಳು ಕುಯ್ಯುವ ಹಾಗೆ ಎಳೆಯದ ಜಾಣ್ಮೆ ನಿರ್ದೇಶಕರದು .ಹಾಗಾಗಿ ಒಂದೂ ಬೇಡದ ಡೈಲಾಗ್ ಅನಿಸುವುದಿಲ್ಲ. ಒಂದು ಸೀನೂ ಬೇಡವಿತ್ತು ಅನಿಸುವುದಿಲ್ಲ. ನಗಿಸುತ್ತಲೇ ಚಿಂತನೆಗೆ ಹಚ್ಚುತ್ತದೆ.

ನಿರ್ದೇಶಕರು ಇಡೀ ಕರ್ನಾಟಕದ ಪ್ರೇಕ್ಷಕರ ಮೆಚ್ಚಿಸುವ ಗೋಜಿಗೇ ಹೋಗಿಲ್ಲ. ಹಾಗಾಗಿ ಸಂಭಾಷಣೆಗಳು ಸಹಜವಾಗಿ ಬಂದಿದೆ. ಒಬ್ಬ ಗುರೂಜಿಯ ನೆನಪಾಗುತ್ತದೆ .ಆ ಪಾತ್ರ ಬಂದಾಗಲಂತೂ ಇಡೀ ಥಿಯೇಟರ್ ಗಹಗಹಿಸುತ್ತದೆ. ಹಾಡುಗಳು ಸಾಲುಗಳೂ ಎಷ್ಟು ಚಂದ ಇದೆ ಅಂದರೆ ಅದನ್ನು ಸಪರೇಟ್ ಆಗಿ ಕೇಳಿ ಅನುಭವಿಸುವ ಹಾಗಿದೆ. ಇಡೀ ಊರೇ ಮುಖ್ಯ ಪಾತ್ರವಾದ ಕಾರಣ ಇವ ಹೀರೋ ಎಂದು ಬೆಟ್ಟು ಮಾಡಿ ತೋರಿಸುವ ಹಾಗಿಲ್ಲ. ನನಗೆ ಬಹಳ ಇಷ್ಟವಾಯಿತು. ಅರಸಿನ ಎಲೆಯಲ್ಲಿ ಮಾಡಿದ ಹಲಸಿನ ಗಟ್ಟಿ ಎಲ್ಲರಿಗೆ ರುಚಿಸಬೇಕಿಲ್ಲ. ಆದರೆ ನಮ್ಮೂರಿನವರಿಗೆ ಅದು ಬಹಳ ಇಷ್ಟ. ಸರಳ ಮತ್ತು ಅತ್ಯಂತ ಚಂದದ ಸಿನಿಮಾ. ಹಗುರಾಗುವ ಸಿನಿಮಾ.

– ರೇಟಿಂಗ್ 9/10

# ಅರಣ್ಯ ಇಲಾಖೆಯಿಂದ ದಲಿತರ ಮೇಲೆ ದೌರ್ಜನ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಅಂಬೇಡ್ಕರ್ ವಸತಿ ಯೋಜನೆಯಡಿ ನಿರ್ಮಿಸಿಕೊಂಡಿದ್ದ ಮನೆಯನ್ನು ಅರಣ್ಯ ಇಲಾಖೆ ಏಕಾಏಕಿ ಜೆಸಿಬಿಯಿಂದ ಧ್ವಂಸಗೊಳಿಸಿ ದಲಿತ ಕುಟುಂಬವನ್ನು ಬೀದಿಗೆ ತಂದಿರುವುದು ಖಂಡನೀಯ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಉಸ್ತುವಾರಿ ಗಂಗಾಧರ್ ಬಹುಜನ್ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನ ಯಸಳೂರು ಹೋಬಳಿ ಮರಡಿಕೆರೆ ಗ್ರಾಮದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಶೋಭರಾಜ ಎಂಬುವರ ಮನೆ ಧ್ವಂಸಗೊಳಿಸಿರುವ ಜಾಗಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಈ ಜಾಗವು ಕಂದಾಯ ಇಲಾಖೆಗೆ ಸೇರಿದ ಸರ್ವೆ ನಂಬರ್ 361, /1 ರಲ್ಲಿ ಒಟ್ಟು 309 ಎಕರೆ ಜಾಗದ ಪೈಕಿ 37 ಎಕರೆ ಗೋಮಾಳದ ಜಾಗವಾಗಿದೆ. ಇದೇ ಜಾಗದಲ್ಲಿ ಕಳೆದ ಆರು ವರ್ಷಗಳಿಂದ ಮೂರ್ನಾಲ್ಕು ದಲಿತ ಕುಟುಂಬಗಳು ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ. ಆದರೂ ಉದ್ದೇಶ ಪೂರ್ವಕವಾಗಿ ಶೋಭರಾಜ ಮೇಲೆ ದೌರ್ಜನ್ಯ ಎಸಗಲಾಗಿದೆ ಎಂದು ದೂರಿದರು. ವಸತಿ ಯೋಜನೆಯಡಿ ಪ್ರಿಯಾ ಶೋಭರಾಜ್ ಹೆಸರಿಗೆ ಮನೆ ಮಂಜೂರಾಗಿದೆ. ಗ್ರಾಮ ಪಂಚಾಯಿತಿಯವರೇ ಸ್ಥಳಕ್ಕೆ ಬಂದು ನಿವೇಶನ ಜಾಗ ಪರಿಶೀಲನೆ ನಡೆಸಿ ಜಾಗವನ್ನು ಜಿಪಿಎಸ್ ಮಾಡಿ ಇವರ ಹೆಸರಿಗೆ ಮನೆ ಮಂಜೂರು ಮಾಡಿ ಕಾಮಗಾರಿ ಆದೇಶ ನೀಡಿರುತ್ತಾರೆ. ನಂತರ ನಾಲ್ಕು ಕಂತುಗಳಲ್ಲಿ ಒಟ್ಟು ಹಣ ಕೂಡ ಬಿಡುಗಡೆಯಾಗಿದೆ. ಆರ್ ಎಫ್‌ಓ ಕೃಷ್ಣ ಎಂಬ ಅಧಿಕಾರಿ ಏಕಾಏಕಿ ಮನೆಯ ಮಾಲೀಕರಿಗೆ ಯಾವುದೇ ನೋಟೀಸ್ ನೀಡದೆ ಯಾವುದೇ ಏಕಾಏಕಿ ಅರಣ್ಯ ಇಲಾಖೆಯ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದೀಯಾ, ಮರಗಳನ್ನು ಕಡಿದು ನಾಶ ಮಾಡುತ್ತೀಯ ಎಂದು ಅವ್ಯಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿ ಮತ್ತು ದೈಹಿಕ ಹಲ್ಲೆ ನಡೆಸಲಾಗಿದೆ ಎಂದು ದೂರಿದರು.

ಆರ್‌ಎಫ್‌ಓ ಕೃಷ್ಣ ಅವರ ಈ ಕ್ರಮ ಅಕ್ಷಮ್ಯವಾಗಿದ್ದು. ಈ ಜಾಗವು ಮೀಸಲು ಅರಣ್ಯ ಪ್ರದೇಶದ ವ್ಯಾಪ್ತಿಗಾಗಲಿ, ಸಾಮಾಜಿಕರಣದ ವ್ಯಾಪ್ತಿಗಾಗಲಿ ಅಥವಾ ಡೀಮ್ಡ್ ಫಾರೆಸ್ಟ್ ವ್ಯಾಪ್ತಿಗಾಗಲಿ ಬರುವುದಿಲ್ಲ. ಎಲ್ಲಾ ದಾಖಲಾತಿಗಳನ್ನು ಸರ್ಕಾರಿ ಗೋಮಾಳ ಎಂದು ಕಂಡುಬರುತ್ತಿದ್ದರು ಅರಣ್ಯ ಇಲಾಖೆಯವರಿಗೆ ಈ ಜಾಗದ ಮೇಲೆ ಯಾವುದೇ ಅಧಿಕಾರ ಇಲ್ಲದೆ ಇದ್ದರೂ ಸಹ ಬಡದಲಿತರ ಮೇಲೆ ದೌರ್ಜನ್ಯ ಮಾಡುವ ಉದ್ದೇಶದಿಂದ ಈ ರೀತಿಯ ಕ್ರೌರ್ಯ ಎಸಗಿದ್ದಾರೆ ಎಂದು ದೂರಿದರು.

ಮುಖ್ಯಮಂತ್ರಿ, ಗೃಹಸಚಿವರು, ಕಂದಾಯ, ಅರಣ್ಯ ಸಚಿವರು, ಜಿಲ್ಲಾಡಳಿತ ಮತ್ತು ಸಕಲೇಶಪುರ ತಾಲ್ಲೂಕು ಆಡಳಿತ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸರ್ಕಾರಕ್ಕೆ ಕಿಂಚಿತ್ತೂ ದಲಿತರ ಮೇಲೆ ಕಾಳಜಿ ಇದ್ದರೆ ಈ ಕೂಡಲೇ ದೌರ್ಜನ್ಯ ಎಸಗಿರುವ ಆರ್ ಎಫ್ ಓ ವಿರುದ್ಧ ಕ್ರಮ ಕೈಗೊಂಡು, ಶೋಭರಾಜನಿಗೆ ಅದೇ ಜಾಗದಲ್ಲಿ ಸರ್ಕಾರದ ವತಿಯಿಂದಲೇ ಪುನಃ ಮನೆ ನಿರ್ಮಾಣ ಮಾಡಿಕೊಡಬೇಕು. ಇಲ್ಲದಿದ್ದರೆ ಇಡೀ ರಾಜ್ಯಾದ್ಯಂತ ಹೋರಾಟಕ್ಕೆ ಬಹುಜನ ಸಮಾಜ ಪಾರ್ಟಿ ಕರೆಕೊಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬಿಎಸ್ಪಿ ಜಿಲ್ಲಾಧ್ಯಕ್ಷ ಲಕ್ಷ್ಮಣ್ ಕೀರ್ತಿ, ಜಿಲ್ಲಾ ಉಸ್ತುವಾರಿ ಮಲ್ಲಯ್ಯ, ಕಿರಣ್ ಕುಮಾರ್, ಜಯವರ್ದನ್, ತಾಲ್ಲೂಕು ಅಧ್ಯಕ್ಷ ವೀರೇಶ್, ಜಿಲ್ಲಾ ಕಾರ್ಯದರ್ಶಿ ಪುಟ್ಟರಾಜು, ಪ್ರಧಾನ ಕಾರ್ಯದರ್ಶಿ ಮಂಜಯ್ಯ, ಮುಖಂಡರಾದ ತುಂಗೇಶ್ ,ಅರುಣ್ ಕುಮಾರ್, ನಿಂಗರಾಜ್, ದೇವೇಂದ್ರ, ಚೈತ್ರಾನಂದ ಶೋಭರಾಜ್ ಹಾಜರಿದ್ದರು.

# ಕೃಷಿ ವಿದ್ಯಾರ್ಥಿಗಳಿಂದ ಕಾರ್ಯಾನುಭವ ಶಿಬಿರ



ಹಾಸನ: ತೆಂಗು ಬೆಳೆಗೆ ವ್ಯಾಪಕವಾಗಿ ಕಾಡುತ್ತಿರುವ ರೈನೋಕ್ರಾಸ್ ಜೀರುಂಡೆ ನಿಯಂತ್ರಣ ಕುರಿತು ಕಾರೆಕೆರೆ ಕೃಷಿ ಕಾಲೇಜಿನ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ರೈತರಿಗೆ ಅರಿವು ಮೂಡಿಸಿದರು.

ತಾಲ್ಲೂಕಿನ ದೊಡ್ಡಚಾಕನಹಳ್ಳಿ ಹಾಗು ಚಿಕ್ಕಚಾಕನಹಳ್ಳಿಯಲ್ಲಿ ಹಮ್ಮಿಕೊಂಡಿರುವ ಮೂರು ತಿಂಗಳ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ರೈನೋಕ್ರಾಸ್ ಜೀರುಂಡೆ ನಿರ್ವಹಣೆಯ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿತ್ತು.

ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಕೀಟಶಾಸ್ತ್ರ ವಿಭಾಗ ಸಹಾಯಕ ಪ್ರಾಧ್ಯಾಪಕಿ ಡಾ. ಸೌಮ್ಯ ಅವರು, ಜೀರುಂಡೆ ಕೀಟದಿಂದ ಆಗುವ ದುಷ್ಪರಿಣಾಮ ಹಾಗು ನಿಯಂತ್ರಣ ಕುರಿತು ಮಾಹಿತಿ ನೀಡಿದರು.

# ಇತಿಹಾಸದಲ್ಲಿ ಈ ದಿನ

## ಜುಲೈ-26

1999: ಈ ದಿನವನ್ನು ಭಾರತವು ಕಾರ್ಗಿಲ್ ಯುದ್ಧದ ವಿಜಯದ ದಿನವಾಗಿ ಆಚರಿಸುತ್ತದೆ.

1953: ಕ್ಯೂಬಾದಲ್ಲಿ ಫಿಡೆಲ್ ಕ್ಯಾಸ್ಟ್ರೋ ನೇತೃತ್ವದ ಮೊದಲ ಹೋರಾಟ. ಫಿಡೆಲ್ ಕ್ಯಾಸ್ಟ್ರೋ ಮತ್ತು ಅವರ ಬೆಂಬಲಿಗರು ಮೋನ್ಕಡಾ ಸೆನೆಟರಿಗೆ ದಾಳಿ ನಡೆಸಿದರು. ಇದು ನಂತರದ ಕ್ಯೂಬಾ ಕ್ರಾಂತಿಯ ಆರಂಭವಾಯಿತು.

1945: ಬ್ರಿಟನ್‌ನಲ್ಲಿ ಕಾರ್ಮಿಕ ಪಕ್ಷ ಅಧಿಕಾರಕ್ಕೆ. ಪಂಡಿತ ಜವಾಹರಲಾಲ್ ನೆಹರು ಅವರ ಸ್ನೇಹಿತ ಅಟ್ಲೀ ಅವರು, ಚರ್ಚಿಲ್ ಅವರನ್ನು ಸೋಲಿಸಿ ಬ್ರಿಟನ್‌ನ ಪ್ರಧಾನಿಯಾದರು.

### ಜನನ

1856: ಜಾರ್ಜ್ ಬೆರ್ನಾರ್ಡ್ ಶಾ, ಐರಿಷ್ ನಾಟಕಕಾರ, ಸಾಹಿತಿ ಹಾಗೂ ನೊಬೆಲ್ ಪುರಸ್ಕೃತರು.

1938: ಗ್ರೆಗೊರಿಯೋ ಮಾಮಾನಿ, ಬಾಲಿವಿಯದ ಸಾಹಿತಿ ಮತ್ತು ರಾಜಕಾರಣಿ.


### ಮರಣ

2008: ಸಮ್ಯುಯೆಲ್ ಹ್ಯುಂಟಿಂಗ್ಟನ್, ಪ್ರಸಿದ್ಧ ರಾಜತಾತ್ವಿಕ ಮತ್ತು The Clash of Civilizations ಕೃತಿಯ ಕರ್ತೃ.

# 300 ಫಲಾನುಭವಿಗಳ ಸೂರು ಕನಸು-ನನಸು

## ಇಂದು ಸಿಎಂ ಸಿದ್ದರಾಮಯ್ಯರಿಂದ ಹಕ್ಕುಪತ್ರ ವಿತರಣೆ | ಅದ್ದೂರಿ ಕಾರ್ಯಕ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಸೀಕೆರೆ: ಕಲ್ಪತರು ನಾಡಿನಲ್ಲಿ ದಶಕಗಳಿಂದ ಸ್ವಂತ ಸೂರಿಗಾಗಿ ಚಾತಕ ಪಕ್ಷಿಯಂತೆ ಕಾದು ಕುಳಿತಿದ್ದ ಸಾವಿರಾರು ಜನರಲ್ಲಿ 300 ಮಂದಿಯ ಕನಸು ಇನ್ನೊಂದು ದಿನದಲ್ಲಿ ನನಸಾಗಲಿದೆ.

2015ನೇ ಸಾಲಿನ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ರಾಜ್ಯ ಸರ್ಕಾರದ ರಾಜೀವ್ ಗಾಂಧಿ ವಸತಿ ನಿಗಮದ ಸಹಯೋಗದಲ್ಲಿ ಅರಸೀಕೆರೆ ನಗರಸಭೆ ವ್ಯಾಪ್ತಿಯ ಜೇನುಕಲ್ ನಗರದಲ್ಲಿ 1,181 ಜಿ ಪ್ಲಸ್ ಒನ್ ಗುಂಪು ಮನೆಗಳ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಆದರೆ, ಸರ್ಕಾರ ಬದಲಾವಣೆ, ಕೇಂದ್ರ ಸರ್ಕಾರ ಸಂಪೂರ್ಣ ಹಣ ಬಿಡುಗಡೆ ಮಾಡಲು ವಿಳಂಬ ಹಾಗೂ ಆಯ್ಕೆಯಾದ ಫಲಾನುಭವಿಗಳು ಹಣವನ್ನು ಪಾವತಿ ಮಾಡದೆ ಇದ್ದರಿಂದ ಗುತ್ತಿಗೆದಾರ ಮನೆಗಳ ನಿರ್ಮಾಣ ಕಾಮಗಾರಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿದ್ದ. ಇದರಿಂದಾಗಿ ಸ್ವಂತ ಸೂರು ಸಿಗಲಿದೆ ಎಂದು ಮಹದಾಸೆ ಇಟ್ಟುಕೊಂಡಿದ್ದ ಸಾವಿರಾರು ಬಡ ಕುಟುಂಬಗಳು ಕಾಯುವಂತಾಗಿತ್ತು.

ಈ ನಡುವೆ ರಾಜ್ಯ ಸರ್ಕಾರ ತನ್ನ ಪಾಲಿನಲ್ಲಿ ಹಣದಲ್ಲಿ ಒಂದು ಮನೆಗೆ 1 ಲಕ್ಷರೂ. ಹೆಚ್ಚುವರಿಯಾಗಿ ನೀಡಿದ್ದರಿಂದ ಹಾಗೂ ಫಲಾನುಭವಿಗಳಿಗೆ ಬ್ಯಾಂಕ್‌ನಲ್ಲಿ ಸಾಲ ಸೌಲಭ್ಯ ದೊರೆತಿರುವುದರಿಂದ ಸದ್ಯಕ್ಕೆ 300 ಮನೆಗಳ ಕಾಮಗಾರಿಯನ್ನು ಪೂರ್ಣಗೊಳಿಸಿ ಮೊದಲ ಹಂತದಲ್ಲಿ ಜು. 26ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಕ್ಕುಪತ್ರ ವಿತರಿಸಲಿದ್ದಾರೆ.

ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಆಸಕ್ತಿ ವಹಿಸಿ ಹಂತವಾಗಿ ಹಂತವಾಗಿ ಮಂಜೂರಾದ 1,181 ಮನೆಗಳು ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಾರೆ. ಆದರೆ, ಫಲಾನುಭವಿಗಳು ತಮ್ಮ ಪಾಲಿನ ಹಣ ಕಟ್ಟಲು ಹಿಂದೇಟು ಹಾಕಿರುವುದರಿಂದ ಸಣ್ಣಪುಟ್ಟ ಕಾಮಗಾರಿ ಬಾಕಿ ಉಳಿದಿದೆ. ಹಣ ಕಟ್ಟಿದ ಫಲಾನುಭವಿಗಳ ಮನೆ ಕಾಮಗಾರಿ ಪೂರ್ಣಗೊಂಡು ಗೃಹ ಪ್ರವೇಶಕ್ಕೆ ಸಿದ್ಧವಾಗಿವೆ.

ಮನೆಗಳನ್ನು ಪಡೆಯಲು ಆಯ್ಕೆಯಾಗಿರುವ ಫಲಾನುಭವಿಗಳಲ್ಲಿ ಸಾಮಾನ್ಯ ವರ್ಗದ ಜನರಿಗೆ 1.80 ಲಕ್ಷ ರೂ. ಹಾಗೂ ಎಸ್ಸಿ-ಎಸ್ಟಿ ಸಮುದಾಯದವರು 1.20 ಲಕ್ಷರೂ. ಹಣ ಕಟ್ಟಬೇಕಿತ್ತು. ಆದರೆ, ಜಿಎಸ್‌ಟಿ ಹಾಗೂ ಇತರೆ ಕಾರಣಗಳಿಂದ ಫಲಾನುಭವಿಗಳು ಕಟ್ಟಬೇಕಿರುವ ಹಣವನ್ನು ಹೆಚ್ಚಾಗಿತ್ತು. ಅಲ್ಲದೇ ಎರಡು ಸರ್ಕಾರಗಳು ಸಕಾಲಕ್ಕೆ ಹಣ ಬಿಡುಗಡೆ ಮಾಡದಿರುವ ಕಾರಣ ಗುತ್ತಿಗೆದಾರ ಮನೆ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ ರಾಜ್ಯ ಸರ್ಕಾರವೇ ಹೆಚ್ಚಿನ ಆಸಕ್ತಿ ವಹಿಸಿ ಒಂದು ಮನೆಗೆ ಹೆಚ್ಚುವರಿಗೆಯಾಗಿ 1 ಲಕ್ಷರೂ. ಬಿಡುಗಡೆ ಮಾಡಿದ್ದರಿಂದ ಸದ್ಯ 1 ಲಕ್ಷರೂ. ಪಾವತಿ ಮಾಡಿದ ಫಲಾನುಭವಿಗಳಿಗೆ ಮನೆ ನೀಡಲು ಸರ್ಕಾರ ಮುಂದಾಗಿದೆ.

### ಫಲಾನುಭವಿಗಳೇ ಹಣ ಕಟ್ಟಿಲ್ಲ

ಹೌಸಿಂಗ್ ಫಾರ್ ಆಲ್ ಯೋಜನೆಯಡಿ 1081 ಜಿ ಪ್ಲಸ್ ಒನ್ ಗುಂಪು ಮನೆಗಳ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ಕೇಂದ್ರ ಸರ್ಕಾರ 1.5 ಲಕ್ಷರೂ. ಹಾಗು ರಾಜ್ಯ ಸರ್ಕಾರ 1.5 ಲಕ್ಷರೂ. ನೀಡುತ್ತದೆ. ಉಳಿದ ಮೊತ್ತವನ್ನು ಫಲಾನುಭವಿಗಳು ಹಾಕಬೇಕಿತ್ತು. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಅನುದಾನ ಬಂದಿದೆ. ಆದರೆ, ಇನ್ನು ಎಲ್ಲಾ ಫಲಾನುಭವಿಗಳಿಂದ ಹಣ ಬಂದಿಲ್ಲ. ಹೀಗಾಗಿ ಎಲ್ಲಾ ಫಲಾನುಭವಿಗಳಿಗೆ ಮನೆಗಳನ್ನು ಹಸ್ತಾಂತರ ಮಾಡಲು ಸಾಧ್ಯವಾಗಿಲ್ಲ.

ಕನಿಷ್ಠ 25 ಲಕ್ಷರೂ. ಬೆಲೆ ಬಾಳುವ ಮನೆಗೆ ಬ್ಯಾಂಕ್‌ನವರು ಸಾಲ ನೀಡಲು ಹಿಂದೇಟು ಹಾಕಿದ್ದರಿಂದ ಫಲಾನುಭವಿಗಳಿಗೆ ಹಣ ಕಟ್ಟಲು ಸಾಧ್ಯವಾಗಿಲ್ಲ. ಇದೀಗ ಒಂದು ಬ್ಯಾಂಕ್ ಮುಂದೆ ಬಂದು 300 ಜನರಿಗೆ ಲೋನ್ ನೀಡಿದ್ದರಿಂದ ಹಣ ಪಾವತಿ ಮಾಡಿ, ಕೆಲಸ ಪೂರ್ಣಗೊಳಿಸಿದ್ದರಿಂದ ಆ 300 ಫಲಾನುಭವಿಗಳಿಗೆ ಮನೆಗಳಿಗೆ ಹಕ್ಕು ಪತ್ರ ನೀಡಲಾಗುತ್ತಿದೆ.

# ಮನೆ ಬೀಗ ಮುರಿದು ಕಳ್ಳತನ

ಹಾಸನ: ಮನೆಯ ಹಿಂಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 16 ಗ್ರಾಂ ತೂಕದ ಚಿನ್ನ ಹಾಗೂ 54 ಗ್ರಾಂ ತೂಕದ ಬೆಳ್ಳಿ ಆಭರಣ ಕದ್ದಿರುವ ಘಟನೆ ಚಿಪ್ಪಿನಕಟ್ಟೆಯಲ್ಲಿ ನಡೆದಿದೆ.

ನಿವಾಸಿ ಸಲ್ಮಾ ಎಂಬುವರ ಮನೆಯಲ್ಲಿ ಕಳುವಾಗಿದೆ. ಕುಟುಂಬ ಸಮೇತ ಸಲ್ಮಾ ಅವರು ಬೆಂಗಳೂರಿನ ತಮ್ಮ ಮಗನ ಮನೆಗೆ ತೆರಳಿದ್ದರು. ಕಿರಿಯ ಪುತ್ರ ಅರ್ಫಾಜ್ ಜು. 24ರ ರಾತ್ರಿ ಮನೆಗೆ ಬಂದಾಗ ಕಳುವಾಗಿರುವುದು ತಿಳಿದಿದೆ.

ಹಿಂಬಾಗಿಲು ಮುರಿದು ಒಳಬಂದಿರುವ ಕಳ್ಳರು ಮುಖ್ಯ ದ್ವಾರ ಲಾಕ್ ಮಾಡಿದ್ದಾರೆ. ಬೀರುವಿನಲ್ಲಿಟ್ಟಿದ್ದ 10 ಗ್ರಾಂ ತೂಕದ ಚಿನ್ನದ ನೆಕ್ಲೆಸ್, 2 ಗ್ರಾಂನ ಒಂದು ಜೊತೆ ಹ್ಯಾಂಗಿಗ್ಸ್, 4 ಗ್ರಾಂ ತೂಕದ ಒಂದು ಜೊತೆ ಹ್ಯಾಂಗಿಗ್ಸ್ ಹಾಗು 54 ಗ್ರಾಂ ತೂಕದ ಬೆಳ್ಳಿ ಆಭರಣ ಕದ್ದಿದ್ದಾರೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಯ್ಯದ್ ತಾಜಿಂಗೆ ಹುಡಾ ಅಧ್ಯಕ್ಷ ಸ್ಥಾನ ನೀಡಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮುಸ್ಲಿಂ ಸಮುದಾಯ ಮುಖಂಡ ಸಯ್ಯದ್ ತಾಜಿಂಗೆ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ವೀರ ಕನ್ನಡಿಗ ಟಿಪ್ಪು ಸೇನೆ ಸಂಸ್ಥಾಪಕ ಅಧ್ಯಕ್ಷ ಅಕ್ಮಲ್ ಜಾವೀದ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಮುಸ್ಲಿಂ ಸಮುದಾಯದ ಕೊಡುಗೆ ಸಾಕಷ್ಟಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತ್ಯತೀತ, ಅಹಿಂದ, ಸಮಾಜವಾದಿ ನಾಯಕರು, ನುಡಿದಂತೆ ನಡೆಯುತ್ತಾರೆಂಬ ನಂಬಿಕೆಯಿದೆ ಎಂದರು.

ಲೋಕಸಭೆ ಚುನಾವಣೆಯಲ್ಲಿ ಶ್ರೇಯಸ್ ಪಟೇಲ್ ಅವರ ಗೆಲುವಿಗೆ ಮುಸ್ಲಿಂರು ಹೆಚ್ಚು ಶ್ರಮಿಸಿದ್ದಾರೆ. ಸಮುದಾಯದ ಶೇ. 90ರಷ್ಟು ಜನರು ಕಾಂಗ್ರೆಸ್ ಬೆಂಬಲಿಸಿದ್ದಾರೆ. ಇದನ್ನೆಲ್ಲಾ ಅರಿತು ಜಿಲ್ಲೆಯ ಮುಸ್ಲಿಂ ಜನರ ಬೇಡಿಕೆಯಂತೆ ಹುಡಾ ಅಧ್ಯಕ್ಷ ಸ್ಥಾನವನ್ನು ಸಮುದಾಯಕ್ಕೆ ನೀಡಬೇಕು ಎಂದು ಕೋರಿದರು.

27 ವರ್ಷಗಳ ಹಿಂದೆ ಜೆಡಿಎಸ್‌ನಿಂದ ಸರ್ದಾರ್ ಪಾಷ ಎಂಬುವರು ಹುಡಾ ಅಧ್ಯಕ್ಷರಾಗಿದ್ದನ್ನು ಹೊರತುಪಡಿಸಿದರೆ ಮತ್ಯಾರಿಗೂ ಅವಕಾಶ ಸಿಕ್ಕಿಲ್ಲ. ಕಾಂಗ್ರೆಸ್ ಸರ್ಕಾರ ಈ ಬಾರಿ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿದರು.

ಸುದ್ದಿಗೋಷ್ಠಿಯಲ್ಲಿ ಆದಿಲ್, ಹಮಿದ್, ಸಯ್ಯದ್ ಇಲ್ವಾದ್ ಇದ್ದರು.

# ಕಾರು ಡಿಕ್ಕಿ: ವೃದ್ಧ ಸಾವು

ಚನ್ನರಾಯಪಟ್ಟಣ: ಪಟ್ಟಣದ ಬಸ್ ನಿಲ್ದಾಣ ಸಮೀಪ ಮುಖ್ಯ ರಸ್ತೆಯಲ್ಲಿ ಕಾರು ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿದ್ದಾರೆ.

ವಿವೇಕಾನಂದ ನಗರದ ಗೋಪಾಲರಾವ್ (63) ಮೃತರು. ಬಸ್ ಇಳಿದು ಮನೆಗೆ ತೆರಳಲೆಂದು ರಸ್ತೆ ದಾಟುತ್ತಿದ್ದಾಗ ಹಾಸನ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ತಕ್ಷಣವೇ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248